

## ಬಾ ಬಾ ರಂಗಿ

ಮುದ್ದು ಮರಿಯೆ
ತುಂಟ ನಗುವೆ
ನನ್ನನೇ ನೋಡುವೆ ಏಕೆ?

ಬಣ್ಣವ ಹಚ್ಚಿ
ನಿನ್ನನು ರೇಗಿಸಿ
ಕೋಪವು ಬಂತೆ ನಿನಗೆ?

ನನ್ನಯ ಚಿನ್ನು
ಎಷ್ಟು ಚೆನ್ನು!
ಆಡುವ ಬಾ ಇನ್ನು

ಕೋಲನು ಹಿಡಿದು
ಮೆಲ್ಲನೆ ನೆಗೆದು
ಓಡುತ ನಲಿಯುವ ಕಣ್ಮಣಿಯೇ...
ಬಣ್ಣದ ಗುಂಡು
ನಿನಗದ ಚೆಂಡು
ಕೋಲಲಿ ದೂಕು ನನ್ನೆಡೆಗೆ
ಬೇಸರ ಬಿಡು
ನಗುತಲಿ ಇರು
ಕೆಂಪು–ಹಸಿರು–ನೀಲಿ
ಇದರ ಹೆಸರೇ ಹೋಳಿ

ಬಣ್ಣಗಳೊಳಗೆ ಇಳಿಯುವ ಬಾ
ನಮ್ಮನು ನಾವೇ ಮರೆಯುವ ಬಾ
ಮುದ್ದು ಮರಿಯೇ ಬಾ ಬಾ ಬಾ

● **ಕೆ. ನಿರ್ಮಲಾ ಮರಡಿಹಳ್ಳಿ**

## ರಂಗು ರಂಗಿನಾಟ

ಎಲ್ಲಿ ಅಡಗಿ ಅವಿತುಕೊಂಡಿರಿ
ಪುಟಾಣಿಗಳೇ...

ಬಣ್ಣದೋಕುಳಿ ಎರಚಿದ ಕಂದಮ್ಮಗಳೇ
ಹತ್ತಿಯಂತೆ ಬೆಳ್ಳಗಿನ ಮೈ ಬಣ್ಣವಿತ್ತು
ಹಾಲಿನಷ್ಟೇ ಬಿಳುಪು ಬಿಳುಪಾಗಿತ್ತು
ಮುಖಕ್ಕಿಷ್ಟು ಕೆಂಪು ಹಸಿರಿನ ಹಂದರ
ಮೈ–ಕೈಗಳಿಗೂ ಚುಕ್ಕಿ, ಚಿತ್ರಚಿತ್ತಾರ
ಜೋತಾಡುವ ಬಿಳಿಯ
ಕಿವಿಗಳೆಲ್ಲಿ ಮಾಯ
ಬಣ್ಣ ಬಣ್ಣದ ಬಲೂನುಗಳು
ಎಲ್ಲಿಂದ ಬಂದವು...
ರಂಗಿನಾಟವಾಡೋಣ
ಬನ್ನಿ ಗೆಳೆಯರೇ ಇತ್ತ...
ತಂಟೆ ಮಾಡಿದರೆ ಕೈ ಕೆಳಗಡೆಯೇ
ಇದೆ ನಾಗರಬೆತ್ತ...

● **ಸವಿತಾ ಎಸ್. ಭಟ್**